ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಖಜಾನೆಯಲ್ಲಿ ನಗದಾಗಿ ಹಣವನ್ನೇ ಕೊಡಲಾಯಿತೆಂದು ನನಗೆ ವರ್ತಮಾನ ಬಂದಿದೆ. ಅದನ್ನು ತಾವು ವಿಚಾರಣೆ ಮಾಡುತ್ತೀರಾ ?

ಶ್ರೀ ಟಿ. ಸಿದ್ದಲಿಂಗಯ್ಯ.—ಮಾಡುತ್ತೇವೆ.

Supply of Electricity to villages of Srinivaspur Taluk.

Q.—119. **Sri G. NARAYANA GOWDA** (Mulbagal-Srinivasapur).—

Will the Government be pleased to state :—

(*a*) the names of villages in Srinivaspur Taluk in which survey and estimates for supply of electricity for irrigation and lighting purposes are done ;

(*c*) at what stage they are ?

A.—**Sri T. SIDDALINGAIYA** (Minister for Industries).—

(*a*) 1. Velagalpura, Taranahalli and Nulipura.
2. Gownpalli.
3. Alambagiri.
4. Pathapalli and Dwapasandra.
5. Nilatoor, Byapalli.
6. Yeldur and Hogalgere.
7. Thadogol and Addagolur.

(*b*) 1, 2, 5 and 6 kept pending for want of funds ; 3 and 4 cannot be taken up now, as this question is dependent on the electrification of Mudeganur and Thutanur ; 7 has been deferred due to poor return.

ಶ್ರೀ ಜಿ. ನಾರಾಯಣಗೌಡ.—ಹಣಕಾಸಿನ ಅಭಾವದಿಂದ 1, 2, 5 ಮತ್ತು 6ನೆಯ ಐಟಂಗಳಲ್ಲಿ ಕಂಡ ಗ್ರಾಮಗಳ ವಿಚಾರವನ್ನು ಹಾಗೆ ಇತ್ಯರ್ಥಮಾಡದೆ ಬಿಟ್ಟಿರಲಾಗಿದೆಯೆಂದು ಉತ್ತರದಲ್ಲಿ ತಿಳಿಸೋಣವಾಗಿದೆ. ಆ ಗ್ರಾಮಗಳ ಕೆಲಸವನ್ನು ತಕ್ಷಣ ಕೈಕೊಳ್ಳುವಿರಾ ?

*ಶ್ರೀ ಟಿ. ಸಿದ್ದಲಿಂಗಯ್ಯ.—ನಾನೂ ಸಹ ಆ ಗ್ರಾಮಗಳ ಕೆಲಸವನ್ನು ಪರೀಕ್ಷೆಮಾಡಿದ್ದೇನೆ. ಮೊಬಲಗೇನೋ ಸಣ್ಣ ಸಣ್ಣನಾಗಿಯೇ ಇದೆ. Take the answer for what it is.

ಶ್ರೀ ಜಿ. ನಾರಾಯಣಗೌಡ.—3—4ನೇ ಐಟಂನಲ್ಲಿ ಕಂಡ ಗ್ರಾಮಗಳು ಊಡೆ, ಉದ್ದನೂರಿಗೆ ಸಂಬಂಧಪಟ್ಟಿದ್ದು, ಅವು ಮುದಿಗನೂರಿಗೆ ಸಂಬಂಧಪಟ್ಟಿಲ್ಲವೆಂಬುದನ್ನು ತಾವು ಪುನಃ ವಿಮರ್ಶೆಮಾಡುವಂತೆ ಹೇಳುತ್ತೀರಾ ?

ಶ್ರೀ ಟಿ. ಸಿದ್ದಲಿಂಗಯ್ಯ.—ವಿಮರ್ಶೆ ಮಾಡಿಸುತ್ತೇನೆ.

Purchase of Transformers.

Q.—243. **Sri R. MUNISWAMIAH** (Bangalore North--Scheduled Castes).—

Will the Government be pleased to state:—

(*a*) the number of transformers that were bought this year since 1st April 1951 up to the date of 1st October 1952 ;

(*b*) the amount spent on purchasing transformers since 1st April 1950 up to date ;

(*c*) the number of transformers that are expected to be bought up to 1st April 1953 ;

(*d*) from where ;

(*e*) at what cost ?

A.—**Sri T. SIDDALINGAIYA** (Minister for Industries).—

(*a*) 2,844 distribution transformers.

(*b*) Rs. 66,72,780-15-0.

(*c*) About 2,500 units to 3,000 units.

(*d*) Mostly from Government Electric Factory, Bangalore, and some from other firms.

(*e*) No figures could be furnished correctly as the prices of all materials are varying considerably. The approximate cost may be taken to be Rs. 44 lakhs.

ಶ್ರೀ ಆರ್. ಮುನಿಸ್ವಾಮಯ್ಯ.—ಇಲ್ಲಿಯವರೆಗೂ ತಾವು ತರಿಸಿಕೊಂಡಿರುವ ಟ್ರಾನ್ಸ್‌ಫಾರ್ಮರುಗಳು ಬಳಕೆಯಲ್ಲಿರುತ್ತವೆಯೆ ?

*ಶ್ರೀ ಟಿ. ಸಿದ್ದಲಿಂಗಯ್ಯ.—ಇವೆ.

ಶ್ರೀ ಆರ್. ಮುನಿಸ್ವಾಮಯ್ಯ.—ಅವುಗಳೆಲ್ಲಾ ಯಾವ ಯಾವ ಯೂನಿಟ್ಟುಗಳವು ?

ಶ್ರೀ ಟಿ. ಸಿದ್ದಲಿಂಗಯ್ಯ.—ಅದನ್ನು ಅಷ್ಟು ಸುಲಭವಾಗಿ ಹೇಳುವುದಕ್ಕಾಗುವುದಿಲ್ಲ. According to the industry, the units vary. ಆದ್ದರಿಂದ ನಿರ್ದಿಷ್ಟವಾಗಿ ಇಷ್ಟಿಷ್ಟೇಯೆಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಆರ್. ಮುನಿಸ್ವಾಮಯ್ಯ.—ಈಗ ತರಿಸಿಕೊಂಡಿರುವ ಟ್ರಾನ್ಸ್‌ಫಾರ್ಮರುಗಳು ಸಾಕಾಗುವುದಿಲ್ಲವೆ ?

ಶ್ರೀ ಟಿ. ಸಿದ್ದಲಿಂಗಯ್ಯ.—ನಮ್ಮಲ್ಲಿ ಎಷ್ಟಿರಬೇಕೋ ಅಷ್ಟಿಲ್ಲ. ಇನ್ನೂ ಬೇಕಾಗಿವೆ.

---

*Asterisk indicates that the remarks or speeches have not been revised by the Member concerned.

ಶ್ರೀ ಆರ್. ಮುನಿಸ್ವಾಮಯ್ಯ.—ಆ ಹೈಕಿ ಎಷ್ಟು indoor ಮತ್ತು outdoor transformers ಗಳು?

ಶ್ರೀ ಟಿ. ಸಿದ್ದಲಿಂಗಯ್ಯ.—ತಾವು ಕೇಳುತ್ತಿರುವುದು ಅರ್ಥವಾಗುವುದಿಲ್ಲ. Outdoor ಗಿಂತಲೂ indoor ಟ್ರಾನ್ಸ್‌ಫಾರ್ಮರುಗಳೇ ಜಾಸ್ತಿ.

Sri H. S. RUDRAPPA (Honnali).—May I know, Sir, whether any of the transformers are damaged?

Sri T. SIDDALINGAIYA.—They will be attended to and repaired Sir.

Sri H. S. RUDRAPPA.—May I know the cost of repairs, and who will pay the cost of repairs?

Sri T. SIDDALINGAIYA.—It is clear; the Department will have to pay.

Sri H. S. RUDRAPPA.—Is there any condition as to who should bear the cost if the transformers become unserviceable within a certain time?

Sri T. SIDDALINGAIYA.—According to the agreement, the Company will have to bear the cost.

An Hon'ble MEMBER.—Do the Government examine whether the transformers manufactured in the Company are in working order before purchasing them?

Sri T. SIDDALINGAIYA.—They will always be examined by the technical people.

ಶ್ರೀ ಆರ್. ಅನಂತರಾಮ್ (ಚಾಮರಾಜಪೇಟೆ).—ದಿನ ಒಂದಕ್ಕೆ ಎಷ್ಟು ಟ್ರಾನ್ಸ್‌ಫಾರ್ಮರುಗಳಂತೆ ಅಲ್ಲಿ ತಯಾರುಮಾಡುತ್ತಾರೆ?

Sri T. SIDDALINGAIYA.—It depends upon the number that we employ, and upon the demand of the Department also.

ಶ್ರೀ ಆರ್. ಅನಂತರಾಮ್.—ಹೋಗಲಿ. ಪರ್ಸೆಂಟೇಜ್ ಇಷ್ಟೆಂದಾದರೂ ಹೇಳುವುದಕ್ಕಾಗುವುದಿಲ್ಲವೆ?

ಶ್ರೀ ಟಿ. ಸಿದ್ದಲಿಂಗಯ್ಯ.—ಇದರಲ್ಲಿ ಇಂಟರೆಸ್ಟ್‌ಗೆ ಸಂಬಂಧಪಟ್ಟವುಗಳು ಸೇರುವುದಿಲ್ಲ. ಇದು ಕೇವಲ ಎರೆಕ್ಷನ್‌ಸಿಟಿಗೆ ಮಾತ್ರ ಸಂಬಂಧಪಟ್ಟಿದ್ದಾಗಿದೆ.

Village Industries' in Bangalore and Kolar Districts.

Q.—440. **Sri S. R. NAGAPPA SETTY** (Shimoga).—

Will the Government be pleased to state :—

(*a*) the number of Village Industries' Committees set up according to Sir M. Visvesvaraya's Scheme in Bangalore and Kolar Districts;

(*b*) the amount of capital collected;

(*c*) the amount spent by Government so far;

(*d*) the number of industries started;

(*e*) the marketing facilities and the kind of protection provided for the articles manufactured?

A.—**Sri T. SIDDALINGAIYA** (Minister for Industries).—

(*a*) 1. Bangalore District ... 54
2. Kolar District ... 55

Total ... 109

		Rs.	a.	p.
(*b*) 1950-51	...	3,05,096	9	6
1951-52	...	1,65,054	2	9
1952-53 (up to end of August 1952)	...	2,522	7	0
Total	...	4,72,673	1	3

		Rs.	a.	p.
(*c*) 1950-51	...	2,77,004	2	1
1951-52	..	3,23,913	7	0
1952-53	...	33,593	2	0
Total	...	6,34,510	10	1

(*d*) 2,838.

(*e*) A Sales Emporium has been opened at the City Market, Bangalore. Artisans, crafts and some industrialists are given facilities to sell their articles through this Emporium, besides the usual open market.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಈ ಯೋಜನೆಯನ್ನು ಕಾರ್ಯರೂಪಕ್ಕೆ ತರಲು ಎಷ್ಟು ಜನರಿದ್ದಾರೆ?

*ಶ್ರೀ ಟಿ. ಸಿದ್ದಲಿಂಗಯ್ಯ.—ಒಬ್ಬ ಸ್ಪೆಷಲ್ ಆಫೀಸರ್, ಒಬ್ಬ ಪರ್ಸನಲ್ ಅಸಿಸ್ಟೆಂಟ್, ನಾಲ್ಕು ಜನ ಗುಮಾಸ್ತರು ಮತ್ತು 50-60 ಜನ ರೆವಿನ್ಯೂ ಇನ್‌ಸ್ಪೆಕ್ಟರುಗಳು ಸರ್ವೇಯರ್ಸ್ ಆಗಿ ಕೆಲಸಮಾಡುತ್ತಿದ್ದಾರೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಅವರಿಗೆಲ್ಲಾ ಯಾವ ತರಹ ಶಿಕ್ಷಣ ಕೊಡಲಾಗಿದೆ?

ಶ್ರೀ ಟಿ. ಸಿದ್ದಲಿಂಗಯ್ಯ.—ಅವರವರಿಗೆ ಅವರವರೇ ಟ್ರೈನಿಂಗ್ ಕೊಟ್ಟುಕೊಳ್ಳತ್ತಿದ್ದಾರೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಹೀಗೆ ತಾವು ಈ ಆಫೀಸರನ್ನು ವರ್ಗಾಯಿಸುತ್ತಿದ್ದರೆ ಬೇರೆಯವರಲ್ಲಿ ನಂಬಿಕೆ ಹೇಗಿರುತ್ತದೆ?

ಶ್ರೀ ಟಿ. ಸಿದ್ದಲಿಂಗಯ್ಯ.—ಪ್ರತ್ಯೇಕವಾಗಿ ಈ ಇರಾಖೆಗೇ ಒಬ್ಬ ಸ್ಪೆಷಲ್ ಆಫೀಸರನ್ನು ನೇಮಕಮಾಡಿದ್ದೇವೆ; ಇವರಲ್ಲಿ ಎಲ್ಲರಿಗೂ ಪೂರ್ಣನಂಬಿಕೆ ಇದೆ.